# ನಂಬಿಕೆಯ ನೂಲು

■ ಬಸು ಬೇವಿನಗಿಡದ
ಕಲೆ: ಎಚ್.ಎಸ್. ಮೋನಪ್ಪ

## ಗಿಣಿಶಾಸ್ತ್ರದ ನೆಪದಲ್ಲಿ ಹಣ ದೋಚುವ ಹುನ್ನಾರ



ಗಿರಿಯಪ್ಪ ತುಂಬ ವಿನಯದಿಂದ ಅದನ್ನು ತೆಗೆದುಕೊಂಡು ಗಿಳಿಪೆಟ್ಟಿಗೆಯ ಮೇಲಿನ ಮುಚ್ಚಳ ಜಗ್ಗಿ, ಅದರೊಳಗೆ ದುಡ್ಡು ಇಟ್ಟು ಮೊದಲಿನ ಹಾಗೆ ಮುಚ್ಚಿದ. ಮತ್ತೆ ಕಾರ್ಡು ನೋಡಿ, ಒಂದು ಕ್ಷಣ ನಿಂತು, ದೇವಪ್ಪನನ್ನು ಉದ್ದೇಶಿಸಿ ಹೇಳತೊಡಗಿದ:

‘ದೇವಪ್ಪ, ನಿಮ್ಮ ಹೆಸರು ಮತ್ತು ನೀವು ತೆಗೆದುಕೊಟ್ಟಿರೋ ಕಾರ್ಡ್ ಮೇಲೆ ಹೇಳಬೇಕೆಂದರೆ ನಿಮಗೆ ಯಾವುದೇ ಆಸೆ ಇಲ್ಲ. ಮತ್ತೊಬ್ಬರಿಗೆ ಸಹಾಯ ಮಾಡಬೇಕು ಅನ್ನೋ ದೊಡ್ಡ ಮನಸ್ಸು ನಿಮಗಿದೆ. ತಾಯಿ, ನಿಮ್ಮ ಮಗ ಬಹಳ ಪರೋಪಕಾರದ ಮನಸ್ಯಾ. ತಾಯಿಗೆ ತಕ್ಕ ಮಗ ತಾಯಿ. ದೇವಪ್ಪ, ನಿಮಗೊಂದು ಏನಿದೆ ಅಂದ್ರೆ, ಎಲ್ಲಾ ದೇವರಿಗೆ ನೀವು ನಮಸ್ಕಾರ ಮಾಡ್ತೀರಿ, ನಿಮ್ಮ ದೃಷ್ಟಿಯೊಳಗ ಕುಲಮತ ಅಂತ ಬೇರೆ ಇಲ್ಲ. ನಿಮಗೆಲ್ಲ ಒಳ್ಳೆಯದೇ ಇದೆ. ಆದರೆ ನಿಮ್ಮ ಹಸ್ತರೇಖೆಯನ್ನ ಯಾರಿಗೂ ತೋರಿಸಬ್ಯಾಡ. ಹಸ್ತದೊಳಗ ಗರುಡರೇಖೆ ಐತಿ, ಗರುಡರೇಖೆ ಅಂದ್ರ ಅರ್ಥ ಆಗ್ತದಲ್ಲ? ತಾಯಿ, ನಿಮ್ಮ ಮಗನಿಗೆ ಗರುಡರೇಖೆ ಅಂದ್ರ ಅರ್ಥ ಆಗ್ತದ ಅಲ್ಲ?’

ಆಗುತ್ತದೆ ಎನ್ನುವಂತೆ ತಾಯಿ ಗೋಣು ಹಾಕಿದಳು. ಈ ಗಿರಿಯಪ್ಪನಿಗೆ ಎಷ್ಟೆಲ್ಲ ಗೊತ್ತಿದೆಯಲ್ಲ? ಜಗತ್ತು ಹೇಗೆ ನಡೆಯುತ್ತಿದೆ, ಇಡೀ ಪ್ರಪಂಚದ ಆಗುಹೋಗುಗಳು ಗೊತ್ತಿರುವ ಈ ಗಿಳಿಶಾಸ್ತ್ರದವನು ಕಾಲಜ್ಞಾನಿಯೇ ಸರಿ ಎಂದುಕೊಂಡಳು.

‘ದೇವಪ್ಪ, ನಿಮ್ಮ ಅಂಗೈಯನ್ನ ಯಾರಿಗೂ ತೋರಿಸಬೇಡ. ತೋರಿಸಿದರೆ ಅದರಿಂದ ನಿಮಗ ನಷ್ಟ ಆಗುವಂಥ ಸಂಭವ ಇದೆ. ಆಮೇಲೆ ನಿಮ್ಗೆ ಲಕ್ಷ್ಮಿಯೋಗ ಇದೆ. ತಾಯಿಯೊಂದಿಗೆ ಮನೆದೇವರ ಪೂಜೆ ಮಾಡು. ಎಲ್ಲೂ ಕೇಳಬ್ಯಾಡ. ಪ್ರಶ್ನೆಯನ್ನಂತೂ ಎಂದೂ ಕೇಳಬ್ಯಾಡ. ಬೇರೆ ಯಾರನ್ನೂ ಎಂದಿಗೂ ನಿನ್ನ ಭವಿಷ್ಯ ಹೆಂಗಿದೆ ಅಂತ ಕೇಳಲಿಕ್ಕೆ ಹೋಗಬ್ಯಾಡ. ಹೋದರೆ ಅದರಿಂದ ಕೆಟ್ಟ ಆಗುವಂತಹ ಸಂಭವ ಇದೆ ತಾಯಿ.’

ಆ ತರಹ ಎಂದಿಗೂ ಕೇಳಬೇಡವೆಂದು ತಾಯಿ ಮಗನಿಗೆ ಕೆಲವು ಸಂಜ್ಞೆಗಳೊಂದಿಗೆ ಅವನಿಗೆ ತಾಕೀತು ಮಾಡಿದಳು. ತಾನು ಎಂದಿಗೂ ಕೇಳುವುದಿಲ್ಲ. ಕೇಳುವವಳು ತನ್ನ ತಾಯಿಯೇ ಎಂದು ಅವನಿಗೆ ಸಿಟ್ಟು ಬಂದಿತು. ಆದರೆ ಇದು ಕೋಪ ಮಾಡಿಕೊಳ್ಳುವ ಸಮಯವಲ್ಲವೆಂದು ಸುಮ್ಮನಾದ.

‘ದೇವಪ್ಪ, ಎಲ್ಲಾ ಚುಲೋ ಆಗತೈತಿ. ಆದರೆ ನಿಮ್ಮ ಬದುಕಿನ್ಯಾಗ ನಿಮಗೆ ಕುಂತರೂ ಚಿಂತೆ, ನಿಂತರೂ ಚಿಂತೆ. ಕೈಯಲ್ಲಿ ಕಾಸು ನಿಲ್ಲತಾ ಇಲ್ಲ. ನೀವು ಮನ್ಯಾಗ ಮನಸ್ಯಾ ಆಗಿರಂಗಿಲ್ಲ. ನಿನ್ನ ಮೂವರು ಗೆಳೆಯರು ಅದಾರು, ಇಬ್ಬರು ದೊಡ್ಡವರು, ಇನ್ನೊಬ್ಬರು ಚಿಕ್ಕವರು. ಅವರು ಯಾರು ಅಂತ ಅರ್ಥ ಆಯ್ತುಲ್ಲ? (ಅವರು ಯಾರು ಎಂದು ಅವನು ತಲೆ ಕೆರೆದುಕೊಳ್ಳತೊಡಗಿದ. ಥೂ! ಯಾರು ಅಂತ ತನಗೆ ಗೊತ್ತಾಗುತ್ತಿಲ್ಲ!) ದೊಡ್ಡ ಯಜಮಾನರು ಮತ್ತು ಸಣ್ಣವರು ನಿಮಗೆ ಸಹಾಯ ಮಾಡ್ತಾರೆ. ಅವರನ್ನ ಕೈಬಿಡಲಿಕ್ಕೆ ಹೋಗಬ್ಯಾಡ್ರಿ. ಇನ್ನೊಬ್ಬರು ಎಂದು ಹೇಳಿದೆನಲ್ಲ? ಅವರು ನಿನ್ನ ಮನೆಗೆ ಎದಕ್ಕೆ ಬರ್ತಾರೆ, ಅವರೇನು ನಿಮಗೆ ಸಹಾಯ ಮಾಡಲಿಕ್ಕೆ ಬರ್ತಾ ಇದಾರೋ, ಇಲ್ಲಾ ನಿಮಗೆ ಮೋಸ ಮಾಡಲಿಕ್ಕೆ ಬರ್ತಾ ಇದಾರೋ? ಗೊತ್ತಿಲ್ಲ. ಅವರಿಂದ ನಿಮಗೆ ಅಪಾಯ ಸಂಭವಿಸಿದರೂ ಸಂಭವಿಸಬಹುದು.